


ನವೋದ್ಯಮ ನೀತಿಯನ್ನು ದೇಶದಲ್ಲೇ ಮೊದಲ ಬಾರಿಗೆ ಅನುಷ್ಠಾನಕ್ಕೆ ತಂದ ರಾಜ್ಯ ಕರ್ನಾಟಕ. ಕೈಗಾರಿಕಾ ಕ್ಷೇತ್ರದಲ್ಲಿ ವೇಗವಾಗಿ ಮುನ್ನಡೆದಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಹೆಚ್ಚಿನ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಲು ಕರ್ನಾಟಕ ಸರ್ಕಾರ ಕಟಿಬದ್ಧವಾಗಿದ್ದು, ರಾಜ್ಯದ ಉದ್ಯಮಸ್ನೇಹಿ ವಾತಾವರಣ ಅಂತರರಾಷ್ಟ್ರೀಯ ಮಟ್ಟದಲ್ಲೂ ಹೆಸರು ಪಡೆದಿದೆ. ರಾಜ್ಯ ಒದಗಿಸಿರುವ ಮೂಲಸೌಲಭ್ಯಗಳಿಂದಾಗಿ ನವೋದ್ಯಮದ ಅಭಿವೃದ್ಧಿಗೆ ಹೆಚ್ಚಿನ ವೇಗ ಸಿಕ್ಕಿದೆ.

## ಹೊಸ ಕೈಗಾರಿಕಾ ನೀತಿ

ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಹೊಸ ಕೈಗಾರಿಕಾ ನೀತಿ – 2014––19ಅನ್ನು ಜಾರಿಗೆ ತಂದಿದೆ. ಈ ನೀತಿಯಡಿ ರೂ. 5 ಲಕ್ಷ ಕೋಟಿ ಬಂಡವಾಳ ಆಕರ್ಷಿಸುವ ಮೂಲಕ ಕೈಗಾರಿಕಾ ಕ್ಷೇತ್ರದ ಪ್ರಗತಿಯನ್ನು ಶೇ.12ಕ್ಕೆ ಕೊಂಡೊಯ್ಯುವ ಉದ್ದೇಶ ಹೊಂದಲಾಗಿದೆ. ಜೊತೆಗೆ 15 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿಯನ್ನೂ ಹಾಕಿಕೊಳ್ಳಲಾಗಿದೆ.

ಕೇಂದ್ರ ಸರ್ಕಾರದ ಕೈಗಾರಿಕಾ ನೀತಿ ಮತ್ತು ಉತ್ತೇಜನ ಇಲಾಖೆಯ ಪ್ರಕಾರ, 2016ರ ವರ್ಷದಲ್ಲಿ ಮಾತ್ರವೇ ಕರ್ನಾಟಕ ರೂ.1,54,173 ಕೋಟಿ ಉದ್ದೇಶಿತ ಬಂಡವಾಳ ಆಕರ್ಷಿಸುವ ಮೂಲಕ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ.

## ಇನ್ವೆಸ್ಟ್ ಕರ್ನಾಟಕ- ೨೦೧೬

ಜಾಗತಿಕ ಹೂಡಿಕೆದಾರರ ಸಮಾವೇಶ ಯಶಸ್ವಿಯಾಗಿದ್ದು ರೂ. 1.27 ಲಕ್ಷ ಕೋಟಿ ಹೂಡಿಕೆಯ 112 ಒಪ್ಪಂದಗಳಿಗೆ ಸಹಿ ಮಾಡಲಾಗಿದೆ. ಈ ಪೈಕಿ ರೂ. 164 ಕೋಟಿ ಹೂಡಿಕೆಯ 4 ಯೋಜನೆಗಳು ಈಗಾಗಲೆ ಜಾರಿಯಾಗಿವೆ. ರೂ.32,480 ಕೋಟಿ ಹೂಡಿಕೆಯ 41 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

ಬೆಂಗಳೂರಿನಲ್ಲಿ ಪ್ರವಾಸಿ ಭಾರತೀಯ ದಿವಸ್– 2017 ಹಾಗೂ 'ಮೇಕ್ ಇನ್ ಇಂಡಿಯಾ' ಸಮ್ಮೇಳನವನ್ನು ಯಶಸ್ವಿಯಾಗಿ ಆಚರಿಸಲಾಗಿದೆ. ನಾಲ್ಕು ವರ್ಷಗಳಲ್ಲಿ ರೂ. 22,175 ಕೋಟಿ ಹೂಡಿಕೆಯ 1.16 ಲಕ್ಷ ಸಣ್ಣ ಮತ್ತು ಅತಿಸಣ್ಣ ಕೈಗಾರಿಕಾ ಘಟಕಗಳ ನೋಂದಣಿಯಾಗಿದ್ದು, ಒಟ್ಟು 10.30 ಲಕ್ಷ ಜನರಿಗೆ ಉದ್ಯೋಗ ಅವಕಾಶ ಲಭ್ಯವಾಗಿದೆ.

ರಾಜ್ಯದ ನೂತನ ಜವಳಿ ನೀತಿ 2013—18ರ ನೀತಿಯಡಿ ರೂ. 1,918 ಕೋಟಿ ಬಂಡವಾಳ ಹೂಡಿಕೆಯಾಗಿದ್ದು, ಒಂದು ಲಕ್ಷ ಜನರಿಗೆ ಉದ್ಯೋಗ ಅವಕಾಶ ಸಿಕ್ಕಿದೆ. ತುಮಕೂರಿನ ವಸಂತ ನರಸಾಪುರದಲ್ಲಿ 542 ಎಕರೆ ಜಮೀನಿನಲ್ಲಿ ಮಷಿನ್ ಟೂಲ್ ಕೈಗಾರಿಕಾ ಪಾರ್ಕ್ ಸ್ಥಾಪಿಸಲಾಗಿದೆ.

- **1.54** ಲಕ್ಷ ಕೋಟಿ ರೂ ಬಂಡವಾಳ ಹೂಡಿಕೆ
- **1.6** ಲಕ್ಷ ಉದ್ಯೋಗ
- ದೇಶದಲ್ಲೇ ಮೊದಲ ಸ್ಥಾನ





## ಹೊಸ ಜೈವಿಕ ತಂತ್ರಜ್ಞಾನ ನೀತಿ

ಜಗತ್ತಿನಾದ್ಯಂತ ಭರದ ಪ್ರಗತಿ ಕಾಣುತ್ತಿರುವ ಕ್ಷೇತ್ರ ಜೈವಿಕ ತಂತ್ರಜ್ಞಾನದ್ದು. ಹೊಸ ಸಂಶೋಧನೆಗಳ ಮೂಲಕ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯ ಈ ಕ್ಷೇತ್ರದ್ದು. ಐ.ಟಿ ಯಲ್ಲಿ ಮುಂಚೂಣಿಯಲ್ಲಿರುವ ಬೆಂಗಳೂರು ಬಿ.ಟಿ ಉದ್ಯಮಕ್ಕೂ ಬಹುದೊಡ್ಡ ಕಾಣಿಕೆ ನೀಡುತ್ತಿದೆ. ಈ ವರ್ಷ ಕರ್ನಾಟಕ ರಾಜ್ಯವು ಮೂರನೇ ಬಾರಿಗೆ ಹೊಸ ಜೈವಿಕ ತಂತ್ರಜ್ಞಾನ ನೀತಿಯನ್ನು ಜಾರಿಗೆ ತಂದಿದೆ. ಈ ಹಿಂದೆ ೨೦೦೧ರಲ್ಲಿ ಮೊದಲ ಮತ್ತು ೨೦೦೯ರಲ್ಲಿ ಎರಡನೇ ನೀತಿಯನ್ನು ತರಲಾಗಿತ್ತು. ಹೊಸ ಬಿ.ಟಿ ನೀತಿಯ ಪ್ರಧಾನ ಲಕ್ಷಣ ಹೀಗಿದೆ:

★ ಕರ್ನಾಟಕ ಜೈವಿಕ ತಂತ್ರಜ್ಞಾನ ನೀತಿ ೨೦೧೭–– ೨೨ಕ್ಕೆ ಅನುಮೋದನೆ.

★ ಹೊಸ ನೀತಿ ಜಾರಿಗೆ ಐದು ವರ್ಷಗಳಲ್ಲಿ ರೂ.೧೯೮ ಕೋಟಿ ವೆಚ್ಚ.

★ ಕೌಶಲ್ಯ ಅಭಿವೃದ್ಧಿಗೆ ರೂ.೩೫–೪೦ ಕೋಟಿ ವೆಚ್ಚ, ಅಂತಾರಾಷ್ಟ್ರೀಯ ಮತ್ತು ದೇಶೀಯ ಮಟ್ಟದಲ್ಲಿ ಸಹಯೋಗ ಏರ್ಪಡಿಸಲು ರೂ.೭ರಿಂದ ೮ ಕೋಟಿ ವೆಚ್ಚ. ಸಾರ್ವಜನಿಕ ಸಂಸ್ಥೆಗಳ ಮೇಲೆ ರೂ.೧೦ ಕೋಟಿ ಹೂಡಿಕೆ.

★ ೨೦೨೫ರ ವೇಳೆಗೆ ದೇಶದ ಜೈವಿಕ ತಂತ್ರಜ್ಞಾನ ಮಾರುಕಟ್ಟೆಯಲ್ಲಿ ಕರ್ನಾಟಕ ಗರಿಷ್ಟ ಪಾಲು ಹೊಂದಲಿದೆ.

★ ಔಷಧಗಳ ಸಂಶೋಧನೆ, ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಯುವಜನತೆಗೆ ಉದ್ಯೋಗ, ಪ್ರೋತ್ಸಾಹ, ತರಬೇತಿ ಎಲ್ಲವೂ ಈ ನೀತಿಯಲ್ಲಿ ಅಡಕವಾಗಿದೆ.